೧೯೮೫-೮೬ನೇ ಸಾಲಿನ ಶೇಕಡವಾರು ರೇಷ್ಮೆ ತೆರಿಗೆಯ ಪ್ರಮಾಣ

೩೫೦. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೫-೮೬ನೇ ಸಾಲಿನಲ್ಲಿ ನಿಗದಿಪಡಿಸಿದ ಶೇಕಡಾವಾರು ರೇಷ್ಮೆ ತೆರಿಗೆಯ ಪ್ರಮಾಣ ಎಷ್ಟು ?

(ಆ) ೧೯೮೬-೮೭ನೇ ಸಾಲಿನಲ್ಲಿ ಸದರಿ ತೆರಿಗೆಯ ಶೇಕಡಾವಾರು ಪ್ರಮಾಣವೆಷ್ಟು ?

(ಇ) ಸದರಿ ತೆರಿಗೆಯನ್ನು ಕಡಿಮೆ ಮಾಡಲು ಕಾರಣಗಳೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ಶೇಕಡ ಎರಡರಷ್ಟು ಮಾರಾಟ ತೆರಿಗೆ

(ಆ) ೧೯೮೬-೮೭ನೇ ಸಾಲಿನಲ್ಲಿ ಶೇಕಡ ಮೂರರಷ್ಟು ಮತ್ತು ೧-೪-೧೯೮೭ರಿಂದ ಶೇಕಡ ೪ ರಷ್ಟು ಮಾರಾಟ ತೆರಿಗೆಯನ್ನು ವಿಧಿಸಲಾಗಿದೆ.

(ಇ) "ಆ" ಪ್ರಶ್ನೆಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಣ್ಯ ಬೆಳೆಸಂವ ಖಾಲಿ ಪ್ರದೇಶ

೯೩೨. ಶ್ರೀ ಆಜ್ಜಿಬಾಳಾ ಜಿ. ಎಸ್. ಹೆಗ್ಡಡೆ (ಅಂಕೋಲ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಅರಣ್ಯ ಬೆಳೆಸಬಹುದಾದ ಎಷ್ಟು ಹೆಕ್ಟೇರ್ ಪ್ರದೇಶ ಇನ್ನು ಖಾಲಿ ಇದೆ ಈ ವರೆಗೆ ಎಷ್ಟು ಖಾಲಿ ಪ್ರದೇಶಗಳಲ್ಲಿ ಗಿಡ ನೆಡಲಾಗಿದೆ ?

(ಆ) ಹೆಚ್ಚು ಯಶಸ್ವಿಯಾಗಿ ನೆಡುತೋಪು ಬೆಳೆಸಿದ ಜಿಲ್ಲೆ ಯಾವುದು ?

(ಇ) ಅರಣ್ಯ ಇಲಾಖೆ ಬೆಳೆಸುತ್ತಿರುವ ಆಕೇಶಿಯಾ ಹೂವಿನಿಂದ ಅಲರ್ಜಿ ಎನ್ನುವ ಹೇಳಿಕೆ ಬಗ್ಗೆ ಸಂಶೋಧನೆ ನಡೆಸಲಾಗಿದೆಯೇ ?

(ಈ) ಹಾಗಿದ್ದಲ್ಲಿ ಅದರ ಫಲಿತಾಂಶವೇನು ?

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು). —

(ಅ) ೧೫.೦೦ ಲಕ್ಷ ಹೆಕ್ಟೇರ್.
೮.೦೮ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗಿಡ ನೆಡಲಾಗಿದೆ.

(ಆ) ಉತ್ತರ ಕನ್ನಡ ಜಿಲ್ಲೆ

(ಇ) ಇಲ್ಲಾ

(ಈ) ಉದ್ಭವಿಸುವುದಿಲ್ಲ

ಮೊಲ ಸಾಕಣೆ ಕೇಂದ್ರ

೯೩೩. ಶ್ರೀ ಆಜ್ಜಿಬಾಳ ಜಿ. ಎಸ್. ಹೆಗ್ಗಡೆ (ಸಿರ್ಸಿ).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡಪ್ರಶ್ನೆಗಳಿಗೆ ದಯಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಮೊಲ ಸಾಕಾಣಿಕೆ ಕೇಂದ್ರ ಎಲ್ಲೆಲ್ಲಿ ಇವೆ ?

(ಆ) ಇದರ ಸಾಕಾಣಿಕೆಯ ಬಗ್ಗೆ ರೈತರಿಂದ ಬಂದ ಪ್ರತಿಕ್ರಿಯೆ ಏನು ?

(ಇ) ರಾಜ್ಯದ ಬೊಕ್ಕಸಕ್ಕೆ ಇದು ಲಾಭ ತಂದಿದೆಯೇ, ಹಾಗಿದ್ದಲ್ಲಿ ಎಷ್ಟು ?